ಅಧ್ಯಕ್ಷರು : ಮಾನ್ಯ ಸಚೇತಕರೆ, ಮಂತ್ರಿಗಳು ಅವರಿಗೆ ಸಂಬಂಧಪಟ್ಟ ಪ್ರಶ್ನೆ ಇದ್ದಾಗ ನಮ್ಮ ಅನುಮತಿಯನ್ನೂ ತೆಗೆದುಕೊಳ್ಳುವುದಿಲ್ಲ ಅಥವಾ ಬೇರೆಯವರಿಗೂ ವಹಿಸುವುದಿಲ್ಲ, ಹೀಗಾದರೆ ಹೇಗೆ?

ಶ್ರೀ ಡಿ.ಮಂಜುನಾಥ್ : ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಪ್ರಾಥಮಿಕ ಶಿಕ್ಷಣ ಸಚಿವರು ಬರುತ್ತಾರೆ, ಮುಂದಿನ ಪ್ರಶ್ನೆ ತೆಗೆದುಕೊಳ್ಳೋಣ.

ಹಾಸನ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ನೀರಿನ ಫ್ಲೋರೈಡ ಅಂಶ ಪತ್ತೆಯಾಗಿರುವ ಕುರಿತು

94(78) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಹಾಸನ ಜಿಲ್ಲೆಯ ಕೆಲವು ತಾಲ್ಲೂಕು ಭಾಗಗಳಲ್ಲಿ ವಿಶೇಷವಾಗಿ ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೊಳವೆ ಬಾವಿ ನೀರಿನಲ್ಲಿ ಫ್ಲೋರೈಡ್ ಅಂಶ ಪತ್ತೆಯಾಗಿರುವುದು ಕಂಡು ಬಂದಿದೆಯೇ;

ಆ. ಎಲ್ಲೆಲ್ಲಿ ಈ ಫ್ಲೋರೈಡ್‌ಯುಕ್ತ ನೀರು ಕಾಣಿಸಿಕೊಂಡಿದೆ; (ಹಾಸನ ಜಿಲ್ಲೆಯ ತಾಲ್ಲೂಕು ವಾರು ವಿವರ ಒದಗಿಸುವುದು);

ಇ. ಇದರಿಂದಾಗಿ ಗ್ರಾಮಾಂತರದ ಜನರಿಗೆ ದಂತ ರೋಗ, ಮುಂತಾದ ರೋಗಗಳು ಕಾಣಿಸಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಈ ಫ್ಲೋರೈಡ್‌ಯುಕ್ತ ನೀರಿನ ಬಳಕೆಗೆ ಸೂಕ್ತ ಮಾರ್ಗದರ್ಶನ, ಪರಿಹಾರಗಳನ್ನು ಸರ್ಕಾರ ನೀಡದಿರಲು ಕಾರಣಗಳೇನು;

ಉ. ಇಂತಹ ನೀರು ಬಳಕೆಗೆ ಯೋಗ್ಯವಲ್ಲವೆಂದು ಘೋಷಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಊ. ಕಾಲಕ್ಕೆ ಪರ್ಯಾಯವಾಗಿ ಕುಡಿಯುವ ನೀರಿನ ಬಳಕೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಬಿ. ಸತ್ಯ ನಾರಾಯಣ(ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು):

ಅ. ಹಾಸನ ಜಿಲ್ಲೆಯಲ್ಲಿ ಕೆಳಕಂಡ ತಾಲ್ಲೂಕುಗಳಲ್ಲಿನ ಕುಡಿಯುವ ನೀರಿನ ಜಲಮೂಲಗಳಲ್ಲಿ ಅಧಿಕ ಫ್ಲೋರೈಡ್ ಅಂಶವಿರುವ ಗ್ರಾಮದ ವಿವರ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಗ್ರಾಮಗಳಸಂಖ್ಯೆ
1	ಅರಸೀಕೆರೆ	125
2	ಚನ್ನರಾಯಪಟ್ಟಣ	14
3	ಹೊಳೆನರಸೀಪುರ	9
	ಒಟ್ಟು	148

ಬಂದಿದೆ.

ಆ. ಅಧಿಕ ಫ್ಲೋರೈಡ್ ಅಂಶವಿರುವ ನೀರನ್ನು ಕುಡಿಯಲು ಬಳಕೆ ಮಾಡಬಾರದೆಂದು ಜನವಸತಿಗಳಲ್ಲಿ ಅರಿವು ಮೂಡಿಸಲಾಗಿದೆ. ಅರಸೀಕೆರೆ ತಾಲ್ಲೂಕಿನ ಯಾದಾಪುರ ಮತ್ತು ಸಂಗೊಂಡನಹಳ್ಳಿ ಗ್ರಾಮಗಳಲ್ಲಿ ಡೀ-ಫ್ಲೋರಿಡೇಷನ್ ಘಟಕಗಳನ್ನು ಸ್ಥಾಪಿಸಿ ಸುರಕ್ಷಿತ ಕುಡಿಯುವ ನೀರು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ. ಅಧಿಕ ಫ್ಲೋರೈಡ್‌ಯುಕ್ತ ನೀರು ಬಳಸದಂತೆ ಅರಿವು ಮೂಡಿಸುವುದರ ಜೊತೆಗೆ ಕಲುಷಿತ ನೀರಿನ ಜಲಮೂಲಗಳ ಕೊಳವೆ ಬಾವಿಗಳಿಗೆ ಕೆಂಪುಬಣ್ಣ ಬಳಿಯಲಾಗಿದ್ದು, ಬಳಕೆ ಮಾಡ ಬಾರದೆಂದು ನಿಷೇಧಿಸಲಾಗಿದೆ.

ಈ. ಕುಡಿಯುವ ನೀರಿನ ಯೋಜನೆಗಳ ನಿರಂತರತೆ ಕಾಪಾಡಲು ಹಾಗೂ ಅಂತರ್ಜಲ ಆಧಾರಿತ ಕುಡಿಯುವ ನೀರಿನ ಯೋಜನೆಗಳಲ್ಲಿನ ಫ್ಲೋರೈಡ್ ಅಂಶ ಕಡಿಮೆ ಮಾಡಲು ಸ್ಥಳೀಯ ಅನುಕೂಲಕ್ಕೆ ತಕ್ಕಂತೆ ತಜ್ಞ ಸಮಿತಿ ವರದಿ ಪ್ರಕಾರ ಸೂಕ್ತ ಅಂತರ್ಜಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ವಿಶೇಷ ಆದ್ಯತೆ ನೀಡಲಾಗುತ್ತಿದೆ. DF ಘಟಕಗಳನ್ನು ಸ್ಥಾಪಿಸುವುದರ ಜೊತೆಗೆ ಕೆಲವು ಜಿಲ್ಲೆಗಳಲ್ಲಿ ಗೃಹೋಪಯೋಗಿ DF ಪಿಲ್ಟರ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ, ಯಗಚಿ ಜಲಾಶಯದಿಂದ ಶಾಶ್ವತ ಕುಡಿಯುವ ನೀರಿನ ರೂ.20.00 ಕೋಟಿ ಅಂದಾಜಿನ ಒಂದು ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವವನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಎ.ಎಸ್.ಶಿವರಾಜು : ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನಲ್ಲಿರುವ ಒಟ್ಟಾರೆ 370 ಗ್ರಾಮಗಳಲ್ಲಿ 208 ಗ್ರಾಮಗಳಲ್ಲಿ ನೀರಿನಲ್ಲಿ ಫ್ಲೋರೈಡ್ ಅಂಶ ಇದೆ. ಆದರೆ ತಾವು 125 ಗ್ರಾಮದಲ್ಲಿ ಮಾತ್ರ ಫ್ಲೋರೈಡ್ ಅಂಶ ಇದೆಯೆಂದು ಹೇಳಿದ್ದೀರಿ. ಅದು ತಪ್ಪು, ಏಕೆಂದರೆ ಜಿಲ್ಲಾಪರಿಷತ್‌ನಲ್ಲಿ ಆರೋಗ್ಯ ಇಲಾಖೆಯಿಂದ ವರದಿಯನ್ನು ತರಿಸಿಕೊಂಡು 208 ಕಡೆ ಫ್ಲೋರೈಡ್ ಅಂಶವಿದೆ ಎಂದು ವರದಿಯಾಗಿದೆ. ಹಾಗೆಯೆ ನನ್ನ ಕ್ಷೇತ್ರದ ಯಾದಾಪುರ ಮತ್ತು ಸಂಗೊಂಡನಹಳ್ಳಿ ಗ್ರಾಮಗಳಲ್ಲಿ ಡೀ-ಫೋರಿಡೇಷನ್ ಫಿಲ್ಟರನ್ನು ಅಳವಡಿಸಿರುವ ಬಗ್ಗೆ ಉತ್ತರದಲ್ಲಿ ಹೇಳೀದ್ದಾರೆ. ಆದರೆ ಅದು ಕೆಟ್ಟು ಹೋಗಿ ಎಷ್ಟು ವರ್ಷಗಳಾಗಿದೆ ಎಂಬುದು ಬಹುಶಃ ಮಾನ್ಯ ಸಚಿವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ, ಅದಕ್ಕೆ ಸರಿಯಾದ ರಿಪೇರಿ ಇಲ್ಲ, ಆದ್ದರಿಂದ ಫ್ಲೋರೈಡ್ ಅಂಶವಿರುವ ನೀರು ಕುಡಿಯಲು ಯೋಗ್ಯವೋ? ಕುಡಿಯಲು ಸಾಧ್ಯವಿಲ್ಲ, ಅದನ್ನು ಬಳಸಬಾರದು ಎಂದು ತಾವು ಹೇಳಿದ್ದೀರಿ, ಅಲ್ಲಿರತಕ್ಕ ಬಾವಿಗಳಿಗೆ, ಬೋರ್‌ವೆಲ್‌ಗಳಿಗೆ ಕೆಂಪು ಬಣ್ಣವನ್ನೇನು ಬಳಿಯಲಾಗಿದೆಯೆಂದು ಉತ್ತರದಲ್ಲಿ ಹೇಳಿದ್ದೀರಿ, ಖಂಡಿತ ಬಣ್ಣವನ್ನು ಬಳಿದಿಲ್ಲ. ಆ ನೀರು ಕುಡಿಯಲು ಯೋಗ್ಯವಲ್ಲವೆಂದಾಗ ಕುಡಿಯಲು ಯೋಗ್ಯವಾದ ನೀರನ್ನು ಸರ್ಕಾರ ಯಾವಾಗ ಒದಗಿಸುತ್ತದೆ?

ಶ್ರೀ ಬಿ.ಸತ್ಯನಾರಾಯಣ : ಮಾನ್ಯ ಸದಸ್ಯರು ಹೇಳಿದ ಹಾಗೆ, ಕಡಿಮೆ ಸಂಖ್ಯೆಯಲ್ಲಿ ತೋರಿಸಿದ್ದಾರೆ ಅನ್ನುವುದನ್ನು ಅವರು ಫ್ಲೋರೈಡ್ ಅಂಶದ ಬಗ್ಗೆ ಮಾತ್ರ ಹೇಳಿದ್ದಾರೆ. ಜಿಲ್ಲಾ ಪಂಚಾಯಿತಿಯವರು ಒದಗಿಸಿರುವ ಲೆಕ್ಕ ಸರಿ ಇದೆ. ಅಧಿಕ ಫ್ಲೋರೈಡ್ ಅಂಶ ಇರುವುದು 125 ಗ್ರಾಮ, ಅಧಿಕ ಲವಣಾಂಶ ಇರುವುದು 51 ಗ್ರಾಮ, ಅಧಿಕ ನೈಟ್ರೇಟ್ ಇರುವುದು 33 ಗ್ರಾಮ, ಅಧಿಕ ಕಬ್ಬಿಣಾಂಶ ಇರುವುದು 6, ಒಟ್ಟು 215 ಸಮಸ್ಯಾತ್ಮಕ ಹಳ್ಳಿಗಳು ಅರಸೀಕೆರೆ ತಾಲ್ಲೂಕಿನಲ್ಲಿ ಬಂದಿವೆ. ಹಾಗಾಗಿ ಅದು ಸರಿ ಇದೆ. ಇದರ ಗುಣಮಟ್ಟ ಹಾಗೂ ಇತರ ಕಾರಣಗಳಿಂದಾಗಿ ಅಲ್ಲಿ ನೀರಾವರಿಗೆ

ತೊಂದರೆಯಾಗುತ್ತಿದೆ. 1.5 ಟಿಪಿಎಂ ಗಿಂತ ಜಾಸ್ತಿ ಫ್ಲೋರೈಡ್ ಅಂಶ ಇದ್ದಲ್ಲಿ ಆ ನೀರನ್ನು ಕುಡಿಯಲಿಕ್ಕೆ ಉಪಯೋಗಿಸಬಾರದು ಎಂದು ನಾವು ಕೆಂಪು ಬಣ್ಣವನ್ನು ಆ ಬೋರ್‌ವೆಲ್‌ಗಳ ಮೇಲೆ ಹಾಕಿಸಿ, ಅದರ ಬಗ್ಗೆ ಜನರಿಗೆ ಮಾಹಿತಿ ಕೊಟ್ಟಿದ್ದೇವೆ. ಇದನ್ನು ಪರ್ಮನೆಂಟಾಗಿ ನಿರ್ಮೂಲ ಮಾಡಬೇಕೆಂದರೆ ಅಂತರ್ಜಲ ಮಟ್ಟವನ್ನು ನಾವು ಹೆಚ್ಚು ಮಾಡಬೇಕು. ಈ ಬಗ್ಗೆ ಬಾಂದಾರುಗಳ ನಿರ್ಮಾಣ, ಚೆಕ್ ಡ್ಯಾಂ, ಇಂಗು ಗುಂಡಿ, percolation tank ಇತ್ಯಾದಿಗಳನ್ನು ಸ್ಥಳೀಯ ಅನುಕೂಲಕ್ಕೆ ತಕ್ಕಂತೆ ನಿರ್ಮಾಣ ಮಾಡಬೇಕೆಂದು ನಾವು ಜಿಲ್ಲಾ ಪಂಚಾಯಿತಿಗಳಿಗೆ ನಿರ್ದೇಶನ ನೀಡಿದ್ದೇವೆ. ಅದಲ್ಲದೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಯಗಚಿ ಜಲಾಶಯದ ಮೂಲ ಆಧರಿಸಿ, ಸುಮಾರು 20 ಕೋಟಿ ರೂ.ಗಳ ಅಂದಾಜಿನಲ್ಲಿ ಸಿದ್ಧಪಡಿಸಲಾಗಿದೆ. ಆ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ತಾಂತ್ರಿಕ ಮತ್ತು ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎ.ಎಸ್.ಬಸವರಾಜು : ಮಾನ್ಯ ಅಧ್ಯಕ್ಷರೇ, ...

ಅಧ್ಯಕ್ಷರು : ಮಾನ್ಯ ಬಸವರಾಜುರವರೇ, ಪ್ರಶ್ನೋತ್ತರ 6 ಗಂಟೆಗೆ ಮುಗಿಯಬೇಕು. ನೀವು ಹಿಂದೆ ಮಾಡಿದ್ರಲ್ಲಾ, ಆ ರೀತಿ ಪದೇ ಪದೇ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ.ಎಸ್.ಬಸವರಾಜು : .... ಇದು ರೈತರ ಸಮಸ್ಯೆ ....

ಅಧ್ಯಕ್ಷರು : ಇಲ್ಲಿ ಪ್ರಸ್ತಾಪವಾಗುವುದೆಲ್ಲವೂ ರೈತರ ಸಮಸ್ಯೆಗಳೇ. ಆದರೆ ನೀವು ಸಂಕ್ಷಿಪ್ತವಾಗಿ ಕೇಳುವುದಿಲ್ಲ, ಮಾತನಾಡುತ್ತಾ ನಿಂತುಕೊಳ್ಳುತ್ತೀರಿ.

ಶ್ರೀ ಎ.ಎಸ್.ಬಸವರಾಜು : .... 208 ಕಡೆಗಳಲ್ಲಿನ ಕೊಳವೆ ಬಾವಿಗಳಲ್ಲಿ ನಷ್ಟಲ್ಲಿ ನೀರಿಲ್ಲ. ಫ್ಲೋರೈಡ್ ಅಂಶ .....

ಅಧ್ಯಕ್ಷರು : ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಏನಾದರೂ ಇದ್ದರೆ ತಾವು ಸಂಕ್ಷಿಪ್ತವಾಗಿ ಕೇಳಿ.

ಶ್ರೀ ಎ.ಎಸ್.ಬಸವರಾಜು : ...ಅದಕ್ಕೆ ನೀರು ಎಲ್ಲಿಂದ ಹಾಯಿಸುತ್ತೀರಿ ಎಂದು ಕೇಳಿದರೆ, ಇವತ್ತಿನ ದಿವಸ ಯಗಚಿ ನೀರಿನಿಂದ ಹಾಯಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಅದು ನಮ್ಮಲ್ಲಿ ಬರಬೇಕಾದರೆ ಇನ್ನೂ 2–3 ವರ್ಷಗಳು ಬೇಕಾಗುತ್ತದೆ. ತಿಪಟೂರಿನಿಂದ ಹೊನವಳ್ಳಿ ಕೆರೆಗೆ ನೀರನ್ನು ಹಾಯಿಸುವ 23 ಕೋಟಿ ರೂ.ಗಳ ಅಂದಾಜಿನ ಯೋಜನೆಗೆ ಈಗಾಗಲೇ ಮಂಜೂರಾತಿಯಾಗಿದ್ದು, ಅದು ಜಾರಿಯಾಗದೆ ನೆನೆಗುದಿಗೆ ಬಿದ್ದಿದೆ. ಅದನ್ನು ಚಾಲನೆಗೆ ಕೊಡಿ ಎಂದು ಕೇಳುತ್ತಿದ್ದೇನೆ. ಅಲ್ಲಿಂದ ನೀರನ್ನು ಹರಿಸಿದರೆ ಖಂಡಿತವಾಗಿಯೂ ಫ್ಲೋರೈಡ್ ಅಂಶ ನಿವಾರಣೆಯಾಗುತ್ತದೆ. ಇದರಿಂದ ಅರಸೀಕೆರೆ ತಾಲ್ಲೂಕಿನ ಅರ್ಧ ಭಾಗಕ್ಕೆ ನೀರು ಬಂದಂತಾಗುತ್ತದೆ ಹಾಗೂ ಕಡೂರು ಮತ್ತು ಹೊಸದುರ್ಗಕ್ಕೆ ಇದೇ ನೀರು ಹೋಗುವಂತಾಗುತ್ತದೆ. ಆದ್ದರಿಂದ ತಿಪಟೂರಿನಿಂದ ಹೊನವಳ್ಳಿ ಕೆರೆಗೆ ನೀರು ಹರಿಸುವ ಏತ ನೀರಾವರಿ ಯೋಜನೆಗೆ ಚಾಲನೆ ಕೊಟ್ಟು, ನೀರನ್ನು ಹರಿಸಿದರೆ ಫ್ಲೋರೈಡ್ ಅಂಶ ನಿವಾರಣೆ ಯಾಗುತ್ತದೆಂದು ನಾನು ಹೇಳಬಯಸುತ್ತೇನೆ. ಯಾವುದೇ ಕಾರಣಕ್ಕೂ ನಮ್ಮಲ್ಲಿ ನೀರಾವರಿ ಇಲ್ಲ. ಇದಕ್ಕೆ ಚಾಲನೆ ಕೊಡಿ ಎಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ.

ಶ್ರೀ ಬಿ.ಸತ್ಯನಾರಾಯಣ : ಈಗಾಗಲೇ ಹೇಮಾವತಿ ನಾಲೆಯಿಂದ ತುಮಕೂರಿಗೆ ನೀರನ್ನು ನಾವು ಕೊಡುತ್ತಿದ್ದೇವೆ. ಅದರ ಬಗ್ಗೆ ಸದಸ್ಯರು ಹೇಳಿದ ಹಾಗೆ, ಅದನ್ನು ನಾನು ನಮ್ಮ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಚಿವರು ಏನು ಉತ್ತರ ಕೊಡುತ್ತಾರೆ?....

ಅಧ್ಯಕ್ಷರು : ಈಗ ಮಾನ್ಯ ಶರಣಪ್ಪ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರ ಪ್ರಶ್ನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಒಂದು ನಿಮಿಷ ಸಾರ್.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರು ತಾವು ದಯಮಾಡಿ ಕುಳಿತುಕೊಳ್ಳಬೇಕು.

Sri J.C.Madhuswamy : I am on a point of order.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಬೇಕು. ಮಾನ್ಯ ಶರನ ಪ್ರಕಾಶ್ ರುದ್ರಪ್ಪನವರು ತಮ್ಮ ಪ್ರಶ್ನೆ ಕೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ...ಮಾನ್ಯ ಸಚಿವರು ಉತ್ತರ ಈ ರೀತಿ ಹೇಳಿದರೆ ಹೇಗೆ ಸಾರ್?...

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮಾಧುಸ್ವಾಮಿಯವರೇ, ತಮ್ಮಂತಹ ಹಿರಿಯ ಸದಸ್ಯರೇ ಈ ರೀತಿ ನಿಂತುಕೊಂಡರೆ ಹೇಗೆ? ನಾನು ಪ್ರಶ್ನೋತ್ತರ ಹೇಗೆ ನಡೆಸುವುದು?

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಸಚಿವರು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ. ದಯವಿಟ್ಟು ನಾನು ಹೇಳುವುದು ಕೇಳಿ. KUWSSB ಯಿಂದ pump ಮಾಡುತ್ತಿರುವ ನೀರನ್ನೇ ನಾವು ತಿಪಟೂರಿಗೆ drinking water ಆಗಿ ಕೊಟ್ಟಿದ್ದೇವೆ. ಆ ನೀರಿನಿಂದ ನಾನು ಹರಿಸುತ್ತೇನೆಂದು ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟರೆ ನಾಳೆ ಏನಾಗುತ್ತದೆ? ಸಾರ್. ಗೊತ್ತಿಲ್ಲದೆ ಮಾತನಾಡಿದರೆ ನಾವು ಅದನ್ನು ಕೇಳಿಸಿಕೊಂಡು ಸುಮ್ಮನೆ ಕುಳಿತುಕೊಂಡಿರಬೇಕೇ ಸಾರ್. ನಾಲೆಗೆ ನೀರು ಬರುತ್ತಿಲ್ಲ. ಈಚನೂರಿನಿಂದ ಕೆರೆಗೆ ನೀರನ್ನು ಪಂಪ್ ಮಾಡಿ ತಿಪಟೂರಿಗೆ ಕುಡಿಯುವ ನೀರನ್ನು ತೆಗೆದುಕೊಂಡು ಹೋಗಿ, ಅಲ್ಲಿಂದ ಹರಿಸಲಿಕ್ಕೆ ಸಾಧ್ಯವೇ?

ಅಧ್ಯಕ್ಷರು : ಅದಕ್ಕೆ ಬೇರೆ ಪ್ರಶ್ನೆಯನ್ನು ಕಳುಹಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಿನಿಸ್ಟರ್ ಆ ರೀತಿ ಹೇಳಿದರೆ, ನಾವು ಅದನ್ನು ಕೇಳಿಕೊಂಡು ಸುಮ್ಮನಿರಬೇಕೇ?

ಅಧ್ಯಕ್ಷರು : ನನ್ನ ಸಮಸ್ಯೆ ಎಂದರೆ, ಪ್ರಶ್ನೋತ್ತರ ಮುಗಿಯಬೇಕು. ಗೊತ್ತಾಯಿತೇ? ಆದುದರಿಂದ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ... ಅವರು ಆ ರೀತಿ ಉತ್ತರ ಕೊಟ್ಟರೆ ನಮ್ಮ ಗತಿಯೇನು?

ಖಾಸಗಿ ಶಾಲಾ ಕಾಲೇಜುಗಳಲ್ಲಿ ಅನುಕಂಪದ ಆಧಾರದ ಮೇಲೆ ಸಿಬ್ಬಂದಿ ನೇಮಕಾತಿ.

95 (555) ಡಾ: ಶರಣಪ್ಪಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?